# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/3295/2014/ಅ.ನಿ.ವಿ-4

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560 001.
Email ID: kla-are4@nic.in
ದಿನಾಂಕ 05/10/2016.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರಡಿಯ ವರದಿ

**ವಿಷಯ:** ರಾಯಚೂರು ಜಿಲ್ಲೆ, ದೇವದುರ್ಗ ಪುರಸಭೆಯ ವ್ಯಾಪ್ತಿಯಲ್ಲಿ ಶ್ರೀ ಅಮರೇಶ ಬಲ್ಲಿದ ರವರ ಮನೆಯಿಂದ ಮಿನಿ ವಿಧಾನಸೌಧದ ವರೆಗೆ ರಸ್ತೆ ಅಗಲೀಕರಣ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

– * –

ಶ್ರೀ ಅಳ್ಳಪ್ಪ ತಂದೆ ಬಸನಗೌಡ, ಮನೆ ನಂ. 6-1-54, ಗೌತಮ ಓಣಿ, ದೇವದುರ್ಗ ತಾಲ್ಲೂಕು ರಾಯಚೂರು ಜಿಲ್ಲೆ ರವರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುವ) ರವರು ಮುಖ್ಯಾಧಿಕಾರಿಯವರು, ಪುರಸಭೆ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ರವರ ವಿರುದ್ಧ ಈ ದೂರನ್ನು ಸಲ್ಲಿಸಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.9ರಡಿ ತನಿಖೆಗೆ ಕೈಗೆತ್ತಿಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ಆಪಾದನೆಗಳು:-**

ದೂರುದಾರರು ತಮ್ಮ ದೂರಿನಲ್ಲಿ ದೇವದುರ್ಗ ಪುರಸಭೆಯ ವ್ಯಾಪ್ತಿಯಲ್ಲಿ 1) ದೇವದುರ್ಗದ ಪಟ್ಟಣದ ಪ್ರಮುಖ ರಸ್ತೆಗಳಾದ ಪೋಲೀಸ್ ಸ್ಟೇಷನ್‌ನಿಂದ ದರ್ಬಾರ ದವರೆಗೆ 2) ಶ್ರೀ ಶಂಭುಲಿಂಗೇಶ್ವರ ಬೆಟ್ಟದಿಂದ ಅಂಬೇಡ್ಕರ್ ಸರ್ಕಲ್‌ವರೆಗೆ ಹಾಗೂ (3) ಶ್ರೀ ಅಮರೇಶ್ ಬಲ್ಲಿದ ವರ ಮನೆಯಿಂದ ಮಿನಿ ವಿಧಾನಸೌಧದವರೆಗಿನ ರಸ್ತೆ ಅಲೀಕರಣ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಪುರಸಭೆಯ ಮುಖ್ಯಾಧಿಕಾರಿಯವರು ಯಾವುದೇ ಕ್ರಮವನ್ನು ತೆಗೆದುಕೊಂಡಿರದೇ ಕರ್ತವ್ಯ ಲೋಪವೆಸಗಿರುತ್ತಾರೆಂದು ಆಪಾದಿಸಿರುತ್ತಾರೆ.

೬೧

3. ಪ್ರಕರಣದ ತನಿಖೆಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಯಚೂರು, ರವರಿಗೆ ವಹಿಸಿದ್ದು, ತದನಂತರ ಅವರು ಪೊಲೀಸ್ ಉಪಾಧೀಕ್ಷಕರ ಮುಖಾಂತರ ತನಿಖೆಯನ್ನು ನಡೆಸಿ, ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.

4. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಯಚೂರು (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುವ) ರವರ ವಿವರವಾದ ತನಿಖಾ ವರದಿಯಲ್ಲಿ, 2010 ರಿಂದ ಇಲ್ಲಿಯವರೆವಿಗೆ ಸುಮಾರು 4 ವರ್ಷ ಕಳೆದರೂ ಸಹ ಶ್ರೀ ಅಮರೇಶ್ ಬಲ್ಲಿದ ರವರ ಮನೆಯಿಂದ ಮಿನಿ ವಿಧಾನಸೌಧದ ರಸ್ತೆ ಅಗಲೀಕರಣದ ಕಾಮಗಾರಿಯನ್ನು ಸಕಾರಣವಿಲ್ಲದೇ ನಿರ್ವಹಿಸದೇ ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡಿದ್ದಾರೆಂದು ಅಭಿಪ್ರಾಯ ನೀಡಿರುತ್ತಾರೆ.

5. ತನಿಖಾ ವರದಿಯಂತೆ 2010 ರಿಂದ ಇಲ್ಲಿಯವರೆಗೆ ಕಾರ್ಯ ನಿರ್ವಹಿಸುತ್ತಿದ್ದ ದೇವದುರ್ಗ ಪುರಸಭೆಯ ಮುಖ್ಯಾಧಿಕಾರಿಯವರನ್ನು ಪ್ರಕರಣದಲ್ಲಿ ಸೇರಿಸಿ ಆಕ್ಷೇಪಣೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಹಿಂದೆ 2010 ರಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಾಧಿಕಾರಿಗಳು ಜಿಲ್ಲಾಧಿಕಾರಿಯವರಿಂದ ಅನುದಾನ ಬಿಡುಗಡೆಯಾಗಿಲ್ಲವಾದ್ದರಿಂದ ಮತ್ತು ಸರ್ಕಾರದ ಅನುದಾನ ಬಂದ ನಂತರ ಶ್ರೀ ಅಮರೇಶ ಬಲ್ಲಿದ ರವರ ಮನೆಯಿಂದ ಮಿನಿ ವಿಧಾನಸೌಧ ದವರೆಗಿನ ರಸ್ತೆ ಅಗಲೀಕರಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿರುತ್ತಾರೆ.

6. ತನಿಖಾ ವರದಿಯಂತೆ ಶ್ರೀ ಅಮರೇಶ್ ಬಲ್ಲಿದ ರವರ ಮನೆಯಿಂದ ಮಿನಿ ವಿಧಾನಸೌಧದವರೆಗಿನ 25 ಅಡಿ ಅಗಲದ ರಸ್ತೆಯ ಕಾಮಗಾರಿಯನ್ನು ಕೈಗೊಳ್ಳಲು ದೇವದುರ್ಗ ಪುರಸಭೆ ದಿನಾಂಕ: 20/11/2010 ರಂದು ನಡೆದ ತುರ್ತು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಂಡು ಬಂದಿದ್ದು ಮತ್ತು ನಂತರದಲ್ಲಿ ಈ ರಸ್ತೆ ಅಗಲೀಕರಣದ ಕಾಮಗಾರಿಗೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿ ಎ.ಎಸ್.ಎಫ್.ಸಿ ಅನುದಾನದಲ್ಲಿ ವಿಶೇಷ ಅನುಮತಿಯೊಂದಿಗೆ ಸದರಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿತ್ತು. ಆದರೆ ನಂತರದಲ್ಲಿ ಆ ರಸ್ತೆಯ ಭಾಗವನ್ನು ಕೆಲವು ವ್ಯಕ್ತಿಗಳು ಒತ್ತುವರಿ ಮಾಡಿ ಗುಡಿಸಲು, ಕಟ್ಟಡ ಮತ್ತು ಷೆಡ್‌ನ್ನು ಕಟ್ಟಿದ್ದರಿಂದ ರಸ್ತೆ ತೆರವಿನ ಬಗ್ಗೆ ಕ್ರಮಕೈಗೊಳ್ಳದೇ ಆ ಕಾಮಗಾರಿಗಳನ್ನು ತಾಂತ್ರಿಕ

ತೊಂದರೆಯಿಂದ ನಿರ್ವಹಿಸಲು ಆಗಿಲ್ಲವೆಂದು ವರದಿಯಂತೆ ಕಂಡು ಬಂದಿದ್ದು ಮತ್ತು 4 ವರ್ಷಗಳು ಕಳೆದರೂ ಸಹ ಇಲ್ಲಿಯವರೆವಿಗೆ ಆ ರಸ್ತೆ ಕಾಮಗಾರಿಯ ಬಗ್ಗೆ ಕೈಗೊಂಡ ನಿರ್ಣಯವನ್ನು ಅನುಷ್ಠಾನಗೊಳಿಸಿಲ್ಲವೆಂದು ವ್ಯಕ್ತವಾಗಿರುತ್ತದೆ. ಅದಲ್ಲದೇ, ಈ ರಸ್ತೆ ಕಾಮಗಾರಿಯನ್ನು ವಿಳಂಬಗೊಳಿಸದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರಿಂದ ಈ ರಸ್ತೆ ಆಗಲೀಕರಣ ಕಾಮಗಾರಿಯನ್ನು ಪೂರ್ಣಗೊಳಿಸಲು ಅನಿರ್ಧಿಷ್ಟವಾಗಿ ಮುಂದುಡೂವುದು ಸೂಕ್ತವಲ್ಲವೆಂದು ಅಭಿಪ್ರಾಯಪಡಲಾಗಿದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರಂತೆ ಪದತ್ತವಾದ ಅಧಿಕಾರದಿಂದ ಸರ್ಕಾರದ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಕಂಡಂತೆ ವಿವರಿಸಲಾದ ರಸ್ತೆ ಆಗಲೀಕರಣ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಕ್ತ ಕ್ರಮವನ್ನು ಕೈಗೊಳ್ಳಲು ಈ ಮೂಲಕ ಶಿಫಾರಸ್ಸು ಮಾಡಲಾಗಿದ್ದು ಮತ್ತು ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡ/ಕೈಗೊಳ್ಳುವ ಬಗ್ಗೆ ಈ ಪ್ರಾಧಿಕಾರಕ್ಕೆ ಒಂದು ತಿಂಗಳೊಳಗಾಗಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(2) ರಂತೆ ವರದಿಯನ್ನು ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand

**(ನ್ಯಾಯಮೂರ್ತಿ ಎನ್.ಆನಂದ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.